# “ನಮ್ಮ ದೇವರಿಗೆ ಸಾಧ್ಯವಿದೆ’’

ನಾವುಗಳು ತುಡಿತದ ಶಕ್ತಿ ಇರುವ ಪ್ರಪಂಚದಲ್ಲಿ ಜೀವಿಸುತ್ತಿದ್ದೇವೆ. ನಮ್ಮ ಕುಟುಂಬವು ಟೆಕ್ಸಾಸ್‌ನ, ಕ್ಲೆಬರ್ನೆಯಲ್ಲಿ ವಾಸಿಸುವಾಗ, ನಮ್ಮ ಸಭೆಯ ಸದಸ್ಯರುಗಳು ಗ್ಲೆನ್‌ರೋಸ್‌ನ ಕಮಾಂಚ್ ಪೀಕ್ ಪವರ್ ಪ್ಲಾಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅದು ಅಪರಿಮಿತವಾದ ಸಾಮರ್ಥ್ಯದ ಶಕ್ತಿಯನ್ನು ಹೊಂದಿತ್ತು. ಒಂದು ಗ್ರಾಮಿನಷ್ಟು ಯೂರೇನಿಯಂನ್ನು ಒತ್ತಡಕ್ಕೆ ಸಿಲುಕಿಸಿದಾಗ, ಅದರಿಂದ ಇಪ್ಪತ್ತು ಟನ್‌ಗಳಷ್ಟು ಡೈನಾಮೈಟ್‌ನ ಶಕ್ತಿಯ ಸಾಮರ್ಥ್ಯವು ಹೊರಹೊಮ್ಮುತ್ತಿತ್ತು ಎಂದು ಕೇಳಲ್ಪಟ್ಟಿದ್ದೇನೆ. ಒಂದು ಗ್ರಾಂ ಎಷ್ಟು ಎಂದು ನೀವು ಅರಿಯಬೇಕೆಂದರೆ ನನ್ನ ಕೈಯಲ್ಲಿರುವ ಒಂದು ಚಿಕ್ಕ ಹುಟ್ಟು ಹಬ್ಬದ ಮೇಣದ ಬತ್ತಿಯನ್ನು ಊಹಿಸಿಕೊಳ್ಳಿರಿ. ಆ ಮೇಣದ ಬತ್ತಿಯು ಒಂದು ಗ್ರಾಂನಷ್ಟು ಇರುತ್ತದೆ. ಅದನ್ನು ಹೊತ್ತಿಸುವದಾದರೆ, ಒಂದು ಕಪ್ ಕಾಫಿಯನ್ನು ಸಹ ಅದು ಬೆಚ್ಚಗೆ ಮಾಡಲಾರದು - ಆದರೆ ನ್ಯೂಕ್ಲಿಯರ್ ಪ್ಲಾಂಟಿನಲ್ಲಿರುವ ಒಂದು ಗ್ರಾಂನಷ್ಟು ಯೂರೇನಿಯಮ್ ಆಗಿದ್ದರೆ ಇಪ್ಪತ್ತು ಟನ್‌ಗಳಷ್ಟು ಶಕ್ತಿಯನ್ನು ಉತ್ಪಾದನೆ ಮಾಡಲು ಸಾಧ್ಯವಿತ್ತು.

ಹೌದು, ಈ ಪ್ರಪಂಚವು ಶಕ್ತಿಯಿಂದ ತುಡಿತಗೊಂಡಿದೆ. ಈ ಶಕ್ತಿಯು ಸಹಜವಾಗಿ ಉಂಟಾಗಲಿಲ್ಲ ಅದಕ್ಕೆ ಒಂದು ಮೂಲವಿದೆ, ಆ ಮೂಲ ದೇವರೆ ಆಗಿದ್ದಾನೆ - ಆ ದೇವರು ಸರ್ವವ್ಯಾಪಿ ಹಾಗೂ ಸರ್ವಶಕ್ತನು ಆಗಿದ್ದಾನೆ.

ದೇವರು ಸರ್ವಶಕ್ತ ದೇವನಾಗಿರುವದರಿಂದ, ಆತನು ತನ್ನ ಮಕ್ಕಳನ್ನು ಯಾವಾಗಲೂ ಸಂತೈಸುತ್ತಾನೆ. ಶದ್ರಕ್. ಮೇಶಕ್ ಹಾಗೂ ಅಬೆದ್‌ನೆಗೋ ಇವರು ಎದುರಿಸಲ್ಪಟ್ಟಾಗ, “ನಾವು ಸೇವಿಸುವ ದೇವರು ನಮ್ಮನ್ನು ಬಿಡಿಸುವನು ...’’ ಅಂದರು (ದಾನಿಯೇಲ 3:17ಎ). ಆ ಹೇಳಿಕೆಯಲ್ಲಿರುವ ಅವರ ಉತ್ತರವು ಪ್ರಮುಖ ವಿಷಯವಾಗಿದೆ: “ನಮ್ಮ ದೇವರಿಗೆ ಸಾಧ್ಯವಿದೆ’’ ಅವರು ಶಕ್ತಿಯುಳ್ಳ ದೇವರನ್ನೇ ಆರಾಧಿಸಿದರು ಎಂದು ನಂಬಿದರು!

ಒಂದು ಕಾಲದಲ್ಲಿ ನಾನು ಆಸ್ಟ್ರೇಲಿಯದಲ್ಲಿ ಸೇವಾ ಗುಂಪಿನೊಂದಿಗೆ ಕಾರ್ಯನಿರ್ವಹಿಸುವಾಗ, ನಾನು ಮಾಡಬಹುದಾದ ಕಾರ್ಯವನ್ನು ನಿರ್ವಹಿಸಲಾರೆ ಎಂದು ಸಂದೇಹ ಪಟ್ಟೆನು. ಆ ಬಲಹೀನವಾದ ಸಂದರ್ಭದಲ್ಲಿ “ದೇವರ ಕೈಯಲ್ಲಿ ಎಲ್ಲವೂ ಸಾಧ್ಯ.’’ ಎಂಬ ಹೇಳಿಕೆಯಿಂದ ತುಂಬಿದವನಾದೆನು. ಅದನ್ನು ನನ್ನ ಸತ್ಯ ವೇದದಿಂದಾಗಲೀ ಅಥವಾ ಯಾರಾದರು ಅದನ್ನು ನನಗೆ ತೋರಿಸಿಕೊಟ್ಟರೆಂದು ನೆನಪಿಲ್ಲದೆ ಹೋದರೂ, ದೇವರ ವಾಕ್ಯವು ಹೃದಯಕ್ಕೆ ಮಾತನಾಡುತ್ತದೆ ಎಂದು ಅರಿತುಕೊಂಡೆನು. ಸ್ವಂತ ಸಾಮರ್ಥ್ಯವಲ್ಲ, ದೇವರ ಸಾಮರ್ಥ್ಯವೇ ಪ್ರಮುಖವಾದದ್ದು.

ದೇವರ *ಸಾಮರ್ಥ್ಯದ* ಬಗ್ಗೆ ಮಾತನಾಡುವಾಗ, ನಾವು ದೇವರ ಶಕ್ತಿಯ ಬಗ್ಗೆ ಮಾತನಾಡುತ್ತಿದ್ದೇವೆ. ಹೊಸ ಒಡಂಬಡಿಕೆಯ ಗ್ರೀಕ್ ಪದವಾದ “ಸಾಧ್ಯ’’ ಎಂಬುದು “ಶಕ್ತಿ’’ ಎಂಬ ಪದವಾಗಿದೆ. ದೇವರು *ಶಕ್ತಿಶಾಲಿ* ಎಂದು ವಾಕ್ಯದಿಂದ ಅಭ್ಯಾಸಮಾಡಿ, ದೇವರು ಸರ್ವಶಕ್ತನು ಎಂದು ನಾವು ಒತ್ತಿ ಹೇಳುವದಾದರೂ, ಈ ವಿಚಾರವನ್ನು ನಾವು ಮುಂದುವರಿಸುವದಿಲ್ಲ. “ನಮ್ಮ ದೇವರಿಗೆ ಸಾಧ್ಯ’’ ಎಂಬ ಹೇಳಿಕೆಯನ್ನು ನಾವು ಅಭ್ಯಾಸಿಸೋಣ. ಈ ವ್ಯಾಖ್ಯಾನವಿರುವ ವಾಕ್ಯಭಾಗಗಳನ್ನು ಪರಿಶೀಲಿಸೋಣ.[1] “ದೇವರಲ್ಲಿ ಸಾಧ್ಯ’’ ಎಂಬ ಹೇಳಿಕೆಯಲ್ಲಿಯೇ ದಿವ್ಯ ಸಂದೇಶದ ಮಹತ್ವವನ್ನು ಕಾಣುತ್ತೇವೆ.

## ಭೂತಕಾಲದಲ್ಲಿ ದೇವರು ಸಾಮರ್ಥ್ಯವನ್ನು ಹೊಂದಿದ್ದನು

ದೇವ ಜನರು ದೇವರ ಸಾಮರ್ಥ್ಯವನ್ನು ಯಾವಾಗಲೂ ನಂಬಿದ್ದರು. ದಾನಿಯೇಲ

3ರಲ್ಲಿ ಬಾಬಿಲೋನಿನ ಅರಸನು ಜನರೆಲ್ಲರು ತನ್ನ ಪ್ರತಿಮೆಯ ಮುಂದೆ ಅಡ್ಡಬೀಳಬೇಕೆಂಬ ಆದೇಶವನ್ನು ನೀಡಿದ್ದನು. ಇಬ್ರಿಯರ ಮೂವರು ಯುವಕರಾದ ಶದ್ರಕ್, ಮೇಶಕ್ ಅಬೇದ್ನೆಗೋ - ಇವರು ಅದನ್ನು ಮಾಡಲು ನಿರಾಕರಿಸಿದರು. ಆಗ ಅವರನ್ನು ಅರಸನ ಬಳಿ ಕರೆತಂದಾಗ, ಇದರಿಂದ ಅವರಿಗಾಗುವ ಹಾನಿಯ ಬಗ್ಗೆ ಅರಸನು ಅವರಿಗೆ ತಿಳಿ ಹೇಳಿದನು: "ನಾನು ನಿಲ್ಲಿಸಿದ ಪ್ರತಿಮೆಯನ್ನು ಪೂಜಿಸಿದರೆ ಸರಿ; ಇಲ್ಲ ವಾದರೆ ತಕ್ಷಣವೇ ಧಗಧಗನೆ ಉರಿಯುವ ಆವಿಗೆಯೊಳಗೆ ಹಾಕಲ್ಪಡುವಿರಿ; ನಿಮ್ಮನ್ನು ನನ್ನ ಕೈಯೊಳಗಿಂದ ಬಿಡಿಸಬಲ್ಲ ದೇವರು ಯಾರು ಎಂದು ಹೇಳಿದನು" (ವಚನ 15ಬಿ). ಆಗ ಯುವಕರು ಈ ಕೆಳಕಂಡ ಉತ್ತರವನ್ನು ನೀಡಿದರು:

> ರಾಜನಿಗೆ ನೆಬೂಕದ್ನೆಚ್ಚರನೇ, ಈ ವಿಷಯದಲ್ಲಿ ನಾವು ನಿನಗೆ ಏನೂ ಹೇಳಬೇಕಾಗಿಲ್ಲ. ಅರಸೇ, *ನಾವು ಸೇವಿಸುವ ದೇವರಿಗೆ ಚಿತ್ತವಿದ್ದರೆ* ಆತನು ಧಗಧಗನೆ ಉರಿಯುವ ಆವಿಗೆಯೊಳಗಿಂದ ನಮ್ಮನ್ನು ಬಿಡಿಸಬಲ್ಲನು; ಹೇಗೂ ನಿನ್ನ ಕೈಯಿಂದ ನಮ್ಮನ್ನು ಬಿಡಿಸುವನು (ವಚನಗಳು 16ಬಿ, 17; ಒತ್ತಿ ಹೇಳಿದ್ದು ನನ್ನದು).

ಅಬ್ರಹಾಮನು ತನ್ನ ಮಗನಾದ ಇಸಾಕನನ್ನು ಯಜ್ಞವರ್ಪಿಸಬೇಕು ಎಂದು ಹೇಳಿರುವ ವಿಶೇಷವಾದ ಇನ್ನೊಂದು ನಿದರ್ಶನವನ್ನು ಸಹ ಕಾಣುತ್ತೇವೆ (ಆದಿಕಾಂಡ 22). ಇಲ್ಲಿ ನಾವು ಅಬ್ರಹಾಮನಲ್ಲಿದ್ದ ನಂಬಿಕೆಯ ಆದರ್ಶವನ್ನು ನೋಡುತ್ತೇವೆ. ಅಬ್ರಹಾಮನು ದೇವರಿಗೆ ಹೇಗೆ ವಿಧೇಯನಾದನು?[2] ಇಬ್ರಿಯ ಗ್ರಂಥಕತೃ ಹೇಳುವ ಹಾಗೆ: "ಅಬ್ರಹಾಮನು ಪರಿಶೋಧಿತನಾಗಿ ನಂಬಿಕೆಯಿಂದಲೇ ಇಸಾಕನನ್ನು ಸಮರ್ಪಿಸಿದನು - ತನ್ನ ಮಗನು ಸತ್ತರೂ ದೇವರು ಅವನನ್ನು ಬದುಕಿಸ *ಸಮರ್ಥನಾಗಿದ್ದಾನೆಂದು* ತಿಳುಕೊಂಡನು" (ಇಬ್ರಿಯ 11:17-19ಎ; ಒತ್ತಿ ಹೇಳಿದ್ದು ನನ್ನದು). ಅಸಾಧ್ಯವಾದದನ್ನು ಸಾಧ್ಯ ಮಾಡುವ ದೇವರನ್ನು ಅಬ್ರಹಾಮನು ನಂಬಿದ್ದನು!

ಯೆಶಾಯ ಹಾಗೂ ಹಿಜ್ಕೀಯನ ಕಾಲದಲ್ಲಿ, ಯೆಹೋವನ ಸಾಮರ್ಥ್ಯವನ್ನು ಸಂದೇಹಿಸಿದವರ ಕುರಿತಾಗಿಯೂ ಕಾಣುತ್ತೇವೆ. ಅಶ್ಶೂರದ ಅರಸನಾದ ಸನ್ಹೇರೀಬನು ಉತ್ತರ ರಾಜ್ಯಗಳನ್ನು ವಶಪಡಿಸಿಕೊಂಡು, ಅವನ ಮುಂದೆ ಇರುವ ಎಲ್ಲವನ್ನು ನಾಶಪಡಿಸಿದನು. ಈಗ ಅವನು ಯೆರೂಸಲೇಮಿನ ಊರ ಬಾಗಿಲಿನ ಮುಂದೆ - ನಂತರ ಅವನು ಈ ಒಂದು ಸಂದೇಶವನ್ನು ಯೆರೂಸಲೇಮಿನ ಜನರಿಗೆ ತಲುಪಿಸಿದನು:

> ನಾನೂ ನನ್ನ ತಂದೆತಾತಂದಿರೂ ಎಲ್ಲಾ ದೇಶಗಳ ಜನಾಂಗಗಳಿಗೆ ಮಾಡಿದ್ದನ್ನು ಕೇಳಲಿಲ್ಲವೋ? ಆ ಜನಾಂಗಗಳ ದೇವತೆಗಳಿಗೆ ಅವರ ದೇಶವನ್ನು ನನ್ನ ಕೈಗೆ ಸಿಕ್ಕದಂತೆ ತಪ್ಪಿಸುವದಕ್ಕೆ ಶಕ್ತಿಯಿತ್ತೋ? ನನ್ನ ತಂದೆತಾತಂದಿರು ನಾಶಮಾಡಿಬಿಟ್ಟ ಆ ಜನಾಂಗಗಳ ದೇವರುಗಳಲ್ಲಿ ಯಾವನು ತನ್ನ ಪ್ರಜೆಯನ್ನು ನನ್ನ ಕೈಯಿಂದ ಬಿಡಿಸುವದಕ್ಕೆ ಸಮರ್ಥನಾಗಿದ್ದನು? ಹಾಗಾದರೆ ನಿಮ್ಮ ದೇವರು ನಿಮ್ಮನ್ನು ನನ್ನ ಕೈಗೆ ಸಿಕ್ಕದಂತೆ ತಪ್ಪಿಸಿ ಕಾಪಾಡುವದಕ್ಕೆ ಶಕ್ತನಾಗಿರುವನೋ? ನೀವು ಹಿಜ್ಕೀಯನಿಂದ ಮರುಳಾಗಿ ಈ ಪ್ರಕಾರ ಮೋಸಹೋಗಬೇಡಿರಿ, ಅವನನ್ನು ನಂಬಲೂ ಬೇಡಿರಿ. ಯಾವ ರಾಜ್ಯ ಜನಾಂಗಗಳ ದೇವತೆಯಾದರೂ ತನ್ನ ಪ್ರಜೆಯನ್ನು ನನ್ನ ಮತ್ತು ನನ್ನ ಪೂರ್ವಿಕರ ಕೈಯಿಂದ ಬಿಡಿಸಲಾರದೆ ಹೋದ ಮೇಲೆ ನಿಮ್ಮ ದೇವರಂಥವನು ನಿಮ್ಮನ್ನು ನನ್ನ ಕೈಗೆ ಸಿಕ್ಕದಂತೆ ತಪ್ಪಿಸಬಲ್ಲನೇ ಎಂದು ಹೇಳಿಸಿದನು (2 ಪೂರ್ವಕಾಲ ವೃತ್ತಾಂತ 32:13-15; ಒತ್ತಿ ಹೇಳಿದ್ದು ನನ್ನದು).

ಸನ್ಹೇರೀಬನು ಸವಾಲು ಸರಿಯಾಗಿತ್ತೇ? ದೇವರು ತನ್ನ ಜನರನ್ನು ಬಿಡುಗಡೆ ಮಾಡಲು ಅಸಾಧ್ಯವೇ? ವಚನ 21ನ್ನು ಗಮನಿಸಿ:

> ಯೆಹೋವನು ದೂತನನ್ನು ಕಳುಹಿಸಿ ಅಶ್ಶೂರದ ಅರಸನ ದಂಡಿನಲ್ಲಿದ್ದ ಎಲ್ಲಾ ಶೂರರನ್ನೂ ನಾಯಕರನ್ನೂ ಅಧಿಪತಿಗಳನ್ನೂ ಸಂಹರಿಸಿದನು; ಅರಸನು ನಾಚಿಕೆಯಿಂದ ತನ್ನ ದೇಶಕ್ಕೆ ಹಿಂದಿರುಗಬೇಕಾಯಿತು. ಅಲ್ಲಿ ಅವನು ತನ್ನ ದೇವರ ಗುಡಿಗೆ ಹೋಗಿದ್ದಾಗ ಅವನ ಸ್ವಂತ ಮಕ್ಕಳೇ ಅವನನ್ನು ಕತ್ತಿಯಿಂದ ಕೊಂದರು.

ದೇವರು ಸಾಮರ್ಥ್ಯವುಳ್ಳವನೇ ಎಂದು ಸನ್ಹೇರೀಬನು ತಿಳಿಯಬೇಕಾಯಿತು!

## ಈ ದಿನವು ಸಹ ದೇವರು ಸಾಮರ್ಥ್ಯವುಳ್ಳವನೇ

ಈಗ ನಾವು ಒಂದು ಆಶ್ಚರ್ಯಕರವಾದ ಸತ್ಯವನ್ನು ಗಮನಿಸೋಣ: ಭೂತಕಾಲದಲ್ಲಿ ಮಾತ್ರ ಸಾಮರ್ಥ್ಯವುಳ್ಳವನಾಗಿರದೇ, ಈ ದಿನವೂ ಸಹ ಸಾಮರ್ಥ್ಯವುಳ್ಳವನಾಗಿದ್ದಾನೆ.

ಅಬ್ರಹಾಮನು ತಮ್ಮ ಮೂಲ ಪಿತೃವಾಗಿದ್ದರಿಂದ, ಅವರನ್ನು ವಿಶೇಷ ಪರಿಗಣನೆ ಮಾಡಬೇಕೆಂದು ಕೆಲವರು ಯೇಸುವಿಗೆ ಹೇಳಿದಾಗ, "ಯೇಸು ಅವರಿಗೆ," ಅಬ್ರಹಾಮನು ನಮಗೆ ಮೂಲ ಪುರುಷನಲ್ಲವೇ ಎಂಬುವ ಆಲೋಚನೆಯನ್ನು ಬಿಡಿರಿ. *ದೇವರು* ಅಬ್ರಹಾಮನಿಗೆ ಈ ಕಲ್ಲುಗಳಿಂದಲೂ ಮಕ್ಕಳನ್ನು ಹುಟ್ಟಿಸಬಲ್ಲನೆಂದು ನಿಮಗೆ ಹೇಳುತ್ತೇನೆ ಅಂದನು (ಮತ್ತಾಯ 3:9; ಲೂಕ 3:8; ಒತ್ತಿ ಹೇಳಿದ್ದು ನನ್ನದು). ಹಳೇ ಒಡಂಬಡಿಕೆಯ ದೇವರು, ಈ ದಿನವೂ ಸಹ ಸಾಮರ್ಥ್ಯವುಳ್ಳವನೇ!

ಲಾಯಿಡ್ ಡಗ್ಲಸ್, ಎಂಬ ಬರಹಗಾರನು ಒಬ್ಬ ವಾಯಿಲಿನ್ ಬೋಧಕನನ್ನು ಸಂಧಿಸಿದನು ಏಕೆಂದರೆ ಅವನು ಬಾಹಿರ ಜೀವಿತದ ಬಗ್ಗೆ ಆಸಕ್ತಿ ಹೊಂದಿದ್ದನು. ಅವನನ್ನು ಸಂಧಿಸಿದಾಗ, "ಈ ದಿನದ ಶುಭಸಂದೇಶವೇನು? ಎಂಬ ಪ್ರಶ್ನೆಯನ್ನು ಕೇಳಿದನು." ಆ ಬೋಧಕನು ತನ್ನ ಟ್ಯೂನಿಂಗ್ ಫೋರ್ಕ್‌ನ್ನು ತಟ್ಟಿದಾಗ ಅದು ಒಂದು ಸುಂದರವಾದ ನಾದವನ್ನು ಹೊರಡಿಸಿತು. ಇದೇ ಆ ಶುಭ ಸಂದೇಶ ಅಂದನು, ಅದು ನಾದದ ಸಂಕೇತ "ಎ" ಅದು ನೆನ್ನೆಯೂ "ಎ" ಆಗಿತ್ತು. ಈ ದಿನವೂ "ಎ" ಆಗಿದೆ. ಇಂದಿನಿಂದ ಸಾವಿರ ವರುಷಗಳ ನಂತರವೂ ಅದು "ಎ" ಸಂಕೇತವೇ ಆಗಿರುತ್ತದೆ ಅಂದನು. ನಮಗಿರುವಂಥ ಶುಭ ಸಂದೇಶವೇನೆಂದರೆ. ದೇವರು ನೆನ್ನೆಯೂ ಸಾಮರ್ಥ್ಯವುಳ್ಳವನಾಗಿದ್ದನು, ಈ ದಿನವೂ ಸಾಮರ್ಥ್ಯವುಳ್ಳವನೇ, ಇಂದಿನಿಂದ ಹತ್ತು ಸಾವಿರ ವರ್ಷಗಳ ನಂತರವೂ ಆತನು ಸಾಮರ್ಥ್ಯವುಳ್ಳವನೇ ಆಗಿರುವನು!

ಹೊಸ ಒಡಂಬಡಿಕೆಯಲ್ಲಿನ "ಸಾಧ್ಯ" ಎಂಬ ಪದವನ್ನು ವಿವಿಧ ರೀತಿಯಲ್ಲಿ "ಡುನಾಮಿಸ್" ಎಂದು ನೋಡುತ್ತೇವೆ. "ಡೈನಾಮೈಟ್" ಡೈನಾಮಿಕ್ ಎಂಬದು ಅದರ ಅರ್ಥವಾಗಿದೆ ಇನ್ನು ಕೆಲವು ಅನುವಾದಗಳಲ್ಲಿ "ಆತನಿಗೆ ಸಾಧ್ಯ" ಎನ್ನುವದಕ್ಕಿಂತಲೂ ಆತನಲ್ಲಿ ಶಕ್ತಿಯಿದೆ. ಎಂಬ ತಾತ್ಪರ್ಯವಿದೆ. ಆದರೆ ಆಲೋಚನೆಯು ಒಂದೇ ಆಗಿರುತ್ತದೆ. ನಮ್ಮ ದೇವರು ಶಕ್ತಿ ಇರುವ ದೇವರೇ!

ದೇವರು ಅನೇಕ ಕಾರ್ಯಗಳನ್ನು ಮಾಡಲು ಸಾಮರ್ಥ್ಯವುಳ್ಳವನು ಎಂದು ಹೊಸ ಒಡಂಬಡಿಕೆಯು ತಿಳಿಸುತ್ತದೆ. ಅವುಗಳಲ್ಲಿ ಕೆಲವನ್ನು ಅಭ್ಯಾಸಮಾಡೋಣ. ಈ ವಾಕ್ಯಭಾಗವನ್ನು ನೀವುಗಳು ಪದೇ ಪದೇ ಓದುವಿರೆಂದು ಭಾವಿಸಿರುವೆನು - ಮತ್ತು ಅದರಲ್ಲಿ ಆಶ್ಚರ್ಯವಿದೆ.

### ದೇವರು ರಕ್ಷಿಸುವ ಸಮರ್ಥ್ಯವನ್ನು ಹೊಂದಿರುವನು

ನಾವು ದೇವರನ್ನು ಪ್ರೀತಿಸದೆ ಹೋದರೂ, ದೇವರು ನಮ್ಮನ್ನು ಪ್ರೀತಿಸಲು ಸಾಧ್ಯವಿದೆ. ಆದ್ದರಿಂದ ಆತನು ತನ್ನ ಒಬ್ಬನೇ ಮಗನನ್ನು ಕಳುಹಿಸಿದನು. ಆತನು ನಮ್ಮನ್ನು ಕ್ಷಮಿಸಲು ಸಾಮರ್ಥ್ಯವಾಗಿದ್ದಾನೆ. ಇದನ್ನು ನಾವು ದೇವರ ಕೃಪೆ ಎಂದು ಹೇಳುತ್ತೇವೆ - ಅದು

ದೇವರು ನೀಡುವ ರಕ್ಷಣೆಯ ಸಾಮರ್ಥ್ಯವನ್ನು ಸಾರುತ್ತದೆ. ಪೌಲನು ಎಫೆಸದ ಹಿರಿಯರಿಗೆ, "ನಾನೀಗ ನಿಮ್ಮನ್ನು ಕರ್ತನಿಗೂ ಆತನ *ಕೃಪಾವಾ ಕ್ಯಕ್ಕೂ ಒಪ್ಪಿಸಿಕೊಡುತ್ತೇನೆ.* ಆತನು ನಿಮ್ಮಲ್ಲಿ ಭಕ್ತಿವೃದ್ಧಿಯನ್ನುಂಟು ಮಾಡುವದಕ್ಕೂ ಪವಿತ್ರರಾದವರೆಲ್ಲರಲ್ಲಿ ನಿಮಗೆ ಹಕ್ಕನು ಅನುಗ್ರಹಿಸುವದಕ್ಕೂ ಶಕ್ತನಾಗಿದ್ದಾನೆ" (ಅಪೊಸ್ತಲರ ಕೃತ್ಯಗಳು 20:32; ಒತ್ತಿ ಹೇಳಿದ್ದು ನನ್ನದು).

ಈ ಸತ್ಯವು ಎಷ್ಟು ಮಹತ್ವದ್ದು ಎಂದು ತಿಳಿಯಲಿಕ್ಕೆ ದೇವರು ನಮಗೆ ಸಹಾಯಿಸಲಿ. ರಕ್ಷಿಸಲ್ಪಡುವಂಥ ಯಾವದೇ ಸಾಮರ್ಥ್ಯವನ್ನು ನಮ್ಮಲ್ಲಿ ನಾವುಗಳು ಹೊಂದಿರುವದಿಲ್ಲ. ಒಂದು ವೇಳೆ ದೇವರಲ್ಲಿ ಸಹ ಆ ಸಾಮರ್ಥ್ಯ ಇಲ್ಲದೆ ಹೋಗಿದ್ದರೆ, ನಾವುಗಳು ನಿರೀಕ್ಷೆ ಇಲ್ಲದವರಾಗಿರುತ್ತಿದ್ದೆವು. "ಹೇಗೂ, ಕರ್ತನು *ಆಹಾಬ* ತನ್ನ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ" (ಇಬ್ರಿಯ 7:25ಎ; ಒತ್ತಿ ಹೇಳಿದ್ದು ನನ್ನದು).

**ಸವಾಲುಗಳನ್ನು ನಾವುಗಳು ಎದುರಿಸುವುದಕ್ಕೆ ದೇವರು ನಮಗೆ ಸಾಮರ್ಥ್ಯವನ್ನು ನೀಡುತ್ತಾನೆ**

ನಾವು ಕ್ರೈಸ್ತರಾಗಿದ್ದಾಗ್ಯೂ, ಲೋಕವು ನಮ್ಮೊಂದಿಗೆ ಇರುತ್ತದೆ. ಆಗ ಕ್ರೈಸ್ತ ಜೀವಿತವನ್ನು ಜೀವಿಸುವದು ಕಠಿಣವಾಗುತ್ತದೆ. ರೋಮಾಪುರ 7ರಲ್ಲಿ ಬಯಲಾದ ಸತ್ಯವನ್ನು ಕಾಣುತ್ತೇವೆ. ಸ್ವಂತ ಸಾಮರ್ಥ್ಯದಿಂದ ಕ್ರೈಸ್ತ ಜೀವಿತವನ್ನು ಜೀವಿಸುವದ ಅಸಾಧ್ಯ. ಆದರೆ ದೇವರಿಂದ ಇದು ಸಾಧ್ಯ ಆತನಿಗೆ ಸ್ತೋತ್ರವಾಗಲಿ; ಆತನು ನಮ್ಮೊಂದಿಗಿದ್ದು ಭಲಪಡಿಸುವದು. ಈ ವಿಶೇಷವಾದ ಸತ್ಯದ ಬಗ್ಗೆ ವಾಕ್ಯದ ಅನೇಕ ಅಧ್ಯಾಯಗಳು ತಿಳಿಸುತ್ತವೆ:

(1) ಇಬ್ರಿಯ 2:18ಬಿ, ಯೇಸುವಿನ ಕುರಿತು ಮಾತನಾಡಿ: "ಶೋಧಿಸಲ್ಪಡುವವರಿಗೆ ಸಹಾಯ *ಮಾಡುವದಕ್ಕೆ ಶಕ್ತನಾಗಿದ್ದಾನೆ.*"

(2) 2 ತಿಮೊಥೆ 1:12ಬಿ ಯಲ್ಲಿ: "ನಾನು ನಂಬಿರುವಾತನನ್ನು ಬಲ್ಲೆನು, ಆತನು ನನ್ನಲ್ಲಿಟ್ಟಿರವದನ್ನು ಆತನು ಆ ದಿನಕ್ಕಾಗಿ *ಕಾಪಾಡುವದಕ್ಕೆ ಶಕ್ತನಾಗಿದ್ದಾನೆಂದು* ಧೃಢವಾಗಿ ನಂಬಿದ್ದೇನೆ" (ಒತ್ತಿ ಹೇಳಿದ್ದು ನನ್ನದು).

(3) ಮನುಷ್ಯನು ದೇವರಿಗೆ ನಂಬಿಗಸ್ತನಾಗಿದ್ದರೂ ಅವನು ಟೀಕೆಗೆ ಒಳಗಾಗುವನು, ಅವನಿಗಾಗಿ ಇರುವ ವಾಗ್ದಾನ: "ಅವನನ್ನು ನಿಲ್ಲಿಸುವದಕ್ಕೆ *ಕರ್ತನು ಶಕ್ತನಾಗಿದ್ದಾನೆ*" (ರೋಮಾಪುರ 14:4ಸಿ; ಒತ್ತಿ ಹೇಳಿದ್ದು ನನ್ನದು).

(4) ಕರ್ತನು ಶಕ್ತನಾಗಿದ್ದಾನೆ ಎಂಬ ವಾಖ್ಯಾನದಲ್ಲಿ, ನಂಬಿಗಸ್ತಿಗೆಯು ಸಹ ಒಳಗೊಂಡಿರುತ್ತದೆ. ಈ ದಿನಗಳ ಆರ್ಥಿಕ ಒತ್ತಡಗಳ ಬೆಳಕಿನಲ್ಲಿ, ಯಾವ ವಿಧವಾದ ನಂಬಿಗಸ್ತರಾದ ವ್ಯಕ್ತಿಗಳಾಗಬಹುದು? ನಾವು ಆಗಲು ಸಾಧ್ಯವಿಲ್ಲ ಎಂಬುದೇ ಉತ್ತರ ನಮ್ಮಿಂದ ಅದು ಸಾಧ್ಯವಿಲ್ಲ. ಅದಕ್ಕೆ ನಮಗೆ ಸಾಮರ್ಥ್ಯವಿಲ್ಲ; ಆದರೆ ದೇವರಿಗೆ ಅದು ಸಾಧ್ಯ. ಕೊಡುವದರ ಕುರಿತು ಎರಡು ವಿಶೇಷ ಅಧ್ಯಾಯಗಳಿವೆ. 2 ಕೊರಿಂಥ 8 ಮತ್ತು 9:

> ಪ್ರತಿಯೊಬ್ಬನು ತನ್ನ ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಕೊಡಲಿ; ದುಃಖದಿಂದಾಗಲಿ ಬಲಾತ್ಕಾರದಿಂದಾಗಲಿ ಯಾರೂ ಕೊಡಬಾರದು; ಯಾಕಂದರೆ ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯುಂಟು. ದೇವರು ಸಕಲವಿಧವಾದ ದಾನಗಳನ್ನು ನಿಮಗೆ ಧಾರಾಳವಾಗಿ ಅನುಗ್ರಹಿಸುವದಕ್ಕೆ ಶಕ್ತನಾದ್ದರಿಂದ ನೀವು ಯಾವಾಗಲೂ ಎಲ್ಲಾ ವಿಷಯ ಗಳಲ್ಲಿ ಪರಿಪೂರ್ಣತೆಯುಳ್ಳವ ರಾಗಿ ಸಕಲಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಿರಬೇಕು. ಉಪಕಾರಿಯ ವಿಷಯದಲ್ಲಿ - ಅವನು ಬಡವರಿಗೆ ಧಾರಾಳಾಗಿ ಕೊಟ್ಟನು; ಅವನ ನೀತಿಯ ಫಲವು ಸದಾಕಾಲವೂ ಇರುವದು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ. ಬಿತ್ತುವವನಿಗೆ ಬೀಜವನ್ನೂ ಉಣ್ಣುವವನಿಗೆ ಆಹಾರವನ್ನೂ ಕೊಡುವಾತನು ನಿಮಗೂ ಬಿತ್ತುವದಕ್ಕೆ

ಬೀಜವನ್ನು ಕೊಟ್ಟು ಹೆಚ್ಚಿಸಿ ನಿಮ್ಮ ಧರ್ಮಕಾರ್ಯಗಳಿಂದಾಗುವ ಫಲಗಳನ್ನು ವೃದ್ಧಿಪಡಿಸುವನು. ಹೀಗೆ ನೀವು ಎಲ್ಲಾ ವಿಷಯಗಳಲ್ಲಿ ಐಶ್ವರ್ಯವಂತರಾಗಿದ್ದು ಉದಾರವಾಗಿ ಕೊಡ ಶಕ್ತರಾಗುವಿರಿ; ಇದಲ್ಲದೆ ನಿಮ್ಮ ದಾನಗಳು ನಮ್ಮ ಕೈಯಿಂದ ಮತ್ತೊಬ್ಬರಿಗೆ ಸೇರಿದಾಗ ದೇವರಿಗೆ ಕೃತಜ್ಞತಾಸ್ತುತಿಯನ್ನುಂಟು ಮಾಡುವದು (2 ಕೊರಿಂಥ 9:7-11).

(5) ನಂತರದಲ್ಲಿ, ನಾವು ಮನಸ್ಸನು ಕಲಕುವ ಅದ್ಭುತವಾದ ವಾಕ್ಯವಿದ್ದಲಿಗೆ ಬರೋಣ: "ನಮ್ಮಲ್ಲಿ ಕಾರ್ಯ ಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಆತನು *ಶಕ್ತನಾಗಿದ್ದಾನೆ*" (ಎಫೆಸ 3:20; ಒತ್ತಿ ಹೇಳಿದ್ದು ನನ್ನದು). ನಮ್ಮ ಸಾಮರ್ಥ್ಯಕ್ಕೆ ಮಿತಿ ಇರುವದಾದರೆ, ದೇವರ ಸಾಮರ್ಥ್ಯಕ್ಕೆ ಮಿತಿ ಇರುವದಿಲ್ಲ!

**ನಾವು ಜಯದ ಜೀವಿತವನ್ನು ಜೀವಿಸಲು ಶಕ್ತಿಯನ್ನು ನೀಡುವ ಸಾಮರ್ಥ್ಯವನ್ನು ದೇವರು ಹೊಂದಿರುವನು**

ಈ ಹಿಂದೆ ಇಬ್ರಿಯ 7:25 ರಿಂದ ದೇವರು ರಕ್ಷಿಸುವದಕ್ಕೆ ಸಾಮರ್ಥ್ಯವನ್ನು ಹೊಂದಿರುವನು ಎಂದು ತಿಳಸಿರುವೆನು. ಆ ಯೋಚನೆಯನ್ನು ಪೂರ್ಣ ಮಾಡೋಣ: "ಆದ ಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ. *ಅವರಿಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ*" (ಒತ್ತಿ ಹೇಳಿದ್ದು ನನ್ನದು.) ನೀವು ಸಮಸ್ಯೆಯಲ್ಲಿರುವದಾದರೆ, ಪಕ್ಕದ ಕೋಣೆಯಲ್ಲಿ ಯೇಸು ನಿಮಗಾಗಿ ಪ್ರಾರ್ಥಿಸುತ್ತಿದ್ದಾನೆ. ಅದು ನಿಮ್ಮ ಸಮಸ್ಯೆಯನ್ನು ಎದುರಿಸಲು ಸಹಕಾರಿಯಾಗಿರುವದಿಲ್ಲವೇ? ಯೇಸುವಿನ ಆಸ್ಥಾನ ಹೆಚ್ಚಾದ ವ್ಯತ್ಯಾಸವನ್ನು ಉಂಟು ಮಾಡುವದಿಲ್ಲವೇ? ಆತನು ಪರಲೋಕದಲ್ಲಿ ನಮಗಾಗಿ ನಿರಂತರವಾದ ವಿಜ್ಞಾಪನೆಗಳನ್ನು ಮಾಡುತ್ತಿರುವನು ಯೂದ 24, 25ರಲ್ಲಿ ವಿಶೇಷವಾದ ಅಂತ್ಯಾಶೀರ್ವಾದವನ್ನು ಕಾಣುತ್ತೇವೆ:

> *ಎಡವಿಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವದಕ್ಕೂ ಶಕ್ತನಾಗಿರುವ ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಪ್ರಭಾವ ಮಹತ್ವ ಅಧಿಪತ್ಯ ಅಧಿಕಾರಗಳು ಎಲ್ಲಾ ಕಾಲಕ್ಕಿಂತ ಮೊದಲೂ [ಇದ್ದ ಹಾಗೆ] ಈಗಲೂ ಯಾವಾಗಲೂ ಇರಲಿ. ಆಮೆನ್.* (ಒತ್ತಿ ಹೇಳಿದ್ದು ನನ್ನದು.)

ಶಾರೀರಿಕವಾಗಿ ನಾವು ನಡುಗುತ್ತೇವೆ. ಶರೀರವು ಕ್ಷೀಣಿಸುತ್ತಾ ಇರುವದಾದರೂ ನಾವುಗಳು ಅದನ್ನು ತಡೆಗಟ್ಟಲು ಅಸಾಧ್ಯ; ಆದರೆ ದೇವರು ಜಯವನ್ನು ನೀಡಲು ಶಕ್ತನಾಗಿದ್ದಾನೆ. ಪೌಲನು ಬರೆದಂತೆ,

> ಕರ್ತನಾದ ಯೇಸು ಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ. ಆತನು ಎಲ್ಲವನ್ನೂ ತನಗೆ ಅಧೀನಮಾಡಿಕೊಳ್ಳಲಾಗುವ ಪರಾಕ್ರಮವನ್ನು ಸಾಧಿಸಿ ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸಿ *ಪ್ರಭಾವವುಳ್ಳ* ತನ್ನ ದೇಹದ ಸಾರೂಪ್ಯವಾಗುವಂತೆ ಮಾಡುವನು (ಫಿಲಿಪ್ಪಿ 3:20, 21; ಒತ್ತಿ ಹೇಳಿದ್ದು ನನ್ನದು)

ಈ ವಾಕ್ಯದ ಅಂತ್ಯ ಭಾಗದಲ್ಲಿ, ನಮ್ಮ ಶಕ್ತಿಯಲ್ಲಿ ಅವಲಂಭಿಸದೆ, ದೇವರ ಶಕ್ತಿಯಲ್ಲೇ ಅವಲಂಭಿಸೋಣ. KJVಯಲ್ಲಿ, "ಆತನು *ಅತ್ಯಧಿಕವಾದದ್ದನ್ನು* ಮಾಡಲು ಶಕ್ತನಾಗಿದ್ದಾನೆ."

(ಒತ್ತಿ ಹೇಳಿದ್ದು ನನ್ನದು.)

ದೇವರ ಸಹಾಯದಿಂದ, ನಾವು ಜಯಭರಿತವಾದ ಜೀವಿತವನ್ನು ಜೀವಿಸಲು ಸಾಧ್ಯವಿದೆ!

## ಈ ದಿನವೂ ದೇವರು ಸಾಮರ್ಥ್ಯವುಳ್ಳವನಾಗಿದ್ದಾನೆ ಆದರೆ ...

ದೇವರು ಡುವಂಥ ಸಾಮರ್ಥ್ಯವುಳ್ಳ ಕಾರ್ಯಗಳನ್ನು ದೇವರು ಸ್ವಯಂ ಆಗಿಯಾವಾಗಲೂ ಮಾಡುವದಿಲ್ಲ. ಆದ್ದರಿಂದ ಅದಕ್ಕೆ ನಾವು "ಆದರೆ" ಎಂದು ಸೇರಿಸಿದ್ದೇವೆ. "ದೇವರು ಮಾಡಲು ಶಕ್ತನಾಗಿದ್ದಾನೆ (ಆತನು ಮಾಡುವನು) ಆದರೆ ..."

### ಅದು ದೇವರ ಚಿತ್ತಕ್ಕನುಗುಣವಾಗಿ ಇದ್ದರೆ ಮಾತ್ರ

ಮೊದಲನೆಯದಾಗಿ, *ದೇವರ ಚಿತ್ತಕ್ಕನುಗುಣವಾಗಿ ಇರವದಾದರೆ* ಮಾತ್ರ ದೇವರು ಕಾರ್ಯಗಳನ್ನು ಮಾಡುತ್ತಾನೆ.

ದಾನಿಯೇಲ 3ನೇ ಅಧ್ಯಾಯಕ್ಕೆ ಹಿಂದಿರುಗೋಣ. 18ನೇ ವಚನವನ್ನು ಇನ್ನು ತಿಳಿಸಿರುವದಿಲ್ಲ. "ನಾವು ಸೇವಿಸುವ ದೇವರಿಗೆ ಚಿತ್ತವಿದ್ದರೆ, ಆತನು ಧಗಧಗನೆ ಉರಿಯುವ ಆವಿಗೆಯೊಳಗಿಂದ ನಮ್ಮನ್ನು ಬಿಡಿಸಬಲ್ಲನು.'' ಎಂಬ ಹೇಳಿಕೆಯನ್ನು ನೀಡಿದ ನಂತರ (ವಚನ 17ಎ). ಶದ್ರಕ್, ಮೇಶಕ್, ಮತ್ತು ಅಬೇದ್‌ನೆಗೋರವರು, "ಚಿತ್ತವಿಲ್ಲದಿದ್ದರೂ ರಾಜನೇ, *ಇದು ನಿನಗೆ ತಿಳಿದಿರಲಿ,* ನಾವು ನಿನ್ನ ದೇವರುಗಳನ್ನು ಸೇವಿಸುವದಿಲ್ಲ, ನೀನು ನಿಲ್ಲಿಸಿರುವ ಬಂಗಾರದ ಪ್ರತಿಮೆಯನ್ನು ಪೂಜಿಸುವದಿಲ್ಲ ಅಂದರು'' (ವಚನ 18; ಒತ್ತಿ ಹೇಳಿದ್ದು ನನ್ನದು). ಇನ್ನೊಂದು ಅರ್ಥದಲ್ಲಿ ಅವರು, "ನಮಗೆ ಬಿಡುಗಡೆ ನೀಡುವದು ದೇವರ ಚಿತ್ತವಿರದೆ ಇದ್ದರೂ, ನಾವು ಆತನನ್ನು ಇನ್ನೂ ಪ್ರೀತಿಸಿ ಸೇವಿಸುವೆವು.'' ಆದಾಗ್ಯೂ ಅವರನ್ನು ಬಿಡಿಸುವದು ದೇವರ ಚಿತ್ತವೇ ಆಗಿತ್ತು, ಬಿಡುಗಡೆಯ ಸಾಧ್ಯತೆಯು ಇಲ್ಲದೆ ಇದ್ದರೂ - ಅವರು ಅದನ್ನು ಒಪ್ಪಿಕೊಂಡಿದ್ದರು.

ದೇವರು ಎಲ್ಲವನ್ನು ಮಾಡುವದಿಲ್ಲ ಎಂಬುದಕ್ಕೆ ಶಿಲುಬೆಯೇ ವಿಶೇಷವಾದ ನಿದರ್ಶನವಾಗಿದೆ. ಇಬ್ರಿಯ 5:7ರಲ್ಲಿ, "ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡು *ಶಕ್ತನಾಗಿರುವಾತನಿಗೆ* ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಲ್ಲಿಸಿದನು'' (ಒತ್ತಿ ಹೇಳಿದ್ದು ನನ್ನದು). ಯೇಸುವನ್ನು ಮರಣದಿಂದ ರಕ್ಷಿಸಲು ದೇವರಿಗೆ ಸಾಧ್ಯವಿತ್ತು. ಆದರೆ ಅದನ್ನು ಮಾಡಲಿಲ್ಲ. ಏಕೆ? ಯಾಕೆಂದರೆ ಅದು ದೇವರ ಚಿತ್ತಕ್ಕನುಗುಣವಾಗಿರಲಿಲ್ಲ.[3]

ದೇವರ ಶಕ್ತಿಯನ್ನು ಕುರಿತಂತೆ, ತೋಟದಲ್ಲಿ ಯೇಸು ತೋರಿದ ಮನೋಭಾವವನ್ನೇ ನಾವು ಅನುಸರಿಸಬೇಕು: "ನನ್ನ ಚಿತ್ತವಲ್ಲ, ನಿನ್ನ ಚಿತ್ತವೇನೆರವೇರಲಿ" (ಲೂಕ 22:42ಬಿ; ಮತ್ತಾಯ 26:39; 1 ಕೊರಿಂಥ 4:19; ಯಾಕೋಬ 4:15).

### ನಾವು ಆತನಿಗೆ ಅವಕಾಶ ಮಾಡಿಕೊಡಬೇಕು

*ನಾವು ಆತನಿಗೆ ಅವಕಾಶ ಮಾಡಿಕೊಡುವದಾದರೆ,*

ದೇವರು ತನ್ನ ಕಾರ್ಯವನ್ನು ನಮ್ಮಲ್ಲಿ ಸಾಧಿಸುತ್ತಾನೆ. ನಾವು ಆತನಿಗೆ ಅವಕಾಶಮಾಡಿಕೊಡಬೇಕು ಎಂಬದು ಆಶ್ಚರ್ಯವಾಗಿರಬಹುದು ನಾವು ದೇವರಿಗೆ ಅವಕಾಶ ಮಾಡಿಕೊಡಬಹುದು. ಈ ವಿಧವಾಗಿ ದೇವರು ಲೋಕವನ್ನು ನಿರ್ಮಿಸಿರುವನು.

ನಮ್ಮಲ್ಲಿ *ಅಪನಂಬಿಕೆ* ಇರುವದಾದರೆ ನಾವು ಆತನಿಗೆ ಮಿತಿಗೊಳಿಸುವವರಾಗಿದ್ದೇವೆ. ಮತ್ತಾಯ 9:28ಬಿ-30ಎರಲ್ಲಿ ಯೇಸು ಇಬ್ಬರು ಕುರುಡರಿಗೆ, "ನಾನು ಇದನ್ನು ಮಾಡಬಲ್ಲೆನೆಂಬದನ್ನು *ಶಕ್ಯವಾಗಿ* ನಂಬುತ್ತೀರೋ? ಎಂದು ಕೇಳಿದ್ದಕ್ಕೆ ಅವರು -

ಹೌದು ಸ್ವಾಮಿ ನಂಬುತ್ತೇವೆ ಅಂದರು.'' ಆಗ ಆತನು ಅವರ ಕಣ್ಣುಗಳನ್ನು ಮುಟ್ಟಿ - ನೀವು ನಂಬಿದಂತೆ ನಿಮಗೆ ಆಗಲಿ ಅಂದನು. ಆಗ ಅವರಿಗೆ ಕಣ್ಣು ಬಂದವು (ಒತ್ತಿ ಹೇಳಿದ್ದು ನನ್ನದು).

ಈ ವಿಷಯವನ್ನು ನಾವು ಅರಿಯದೆ ಇರುವದರಿಂದ ಆತನನ್ನು ಮಿತಿಗೊಳಿಸಲು ಸಾಧ್ಯವಿದೆ. ದೇವರ ವಾಕ್ಯವು ದೇವರ ತೋರ್ಪಡಿಸುವಿಕೆಯಾಗಿದೆ, ದೇವರ ವಾಕ್ಯ ದಲ್ಲಿರುವ ಸಾಧ್ಯತೆಗಳನ್ನು ವಾಕ್ಯದ ಅನೇಕ ಭಾಗಗಳು ತಿಳಿಸುತ್ತವೆ - ಅದು ರಕ್ಷಣೆಯ ತಿಳುವಳಿಕೆಯ ಜ್ಞಾನವನ್ನು ನೀಡುತ್ತದೆ (2 ತಿಮೊಥೆ 3:15) ಅದು ನಮ್ಮನ್ನು ರಕ್ಷಿಸುವ ಸಾಮರ್ಥ್ಯ ಹೊಂದಿರುತ್ತದೆ (ಯಾಕೋಬ 1:21). ಹೇಗೋ ನಾವು ದೇವರ ವಾಕ್ಯವನ್ನು ಅರಿಯದಿದ್ದರೆ, ಅದರ ಬಲವನ್ನು ಅರಿಯಲಾರೆವು.

ಅವಿಧೇಯತೆಯ ನಿಮಿತ್ತ ನಾವು ಆತನನ್ನು *ಮಿತಿಗೊಳಿಸುತ್ತೇವೆ.* ನಾವು ದೇವರಿಗೆ ಅಧೀನರಾದರೆ, ಆತನು ನಮ್ಮನ್ನು ತನ್ನ ಶಕ್ತಿಯಿಂದ ತುಂಬಿಸುತ್ತಾನೆ. ''ನೆಬುಕದ್ನೇಚ್ಚರನ ಕನಸುಗಳಲ್ಲಿ'' ಒಂದನ್ನು ವಿವರಿಸುವಾಗ ಅವನು ದಾನಿಯೇಲನಿಗೆ ಹೇಳಿದ ಮಾತನ್ನು ನೆನಪು ಮಾಡುತ್ತೇನೆ: ''ನನ್ನರಾಜ್ಯದ ಸಕಲ ವಿದ್ವಾಂಸರಲ್ಲಿ ಯಾರೂ ಅದರ ಅರ್ಥವನ್ನು ತಿಳಿಸಲಾರರು: ನೀನು ಅದನ್ನು ತಿಳಿಸು ಪರಿಶುದ್ಧ ದೇವರುಗಳ ಆತ್ಮವು ನಿಮ್ಮಲ್ಲಿ ನೆಲೆಸಿರುವದರಿಂದ *ನೀನು ಶಕ್ತನೇ* ಸರಿ'' (ದಾನಿಯೇಲ 4:18; ಒತ್ತಿ ಹೇಳಿದ್ದು ನನ್ನದು). ನಿಜ ದೇವರ ಬಗ್ಗೆ ನೆಬುಕದ್ನೆಜರನು ಹೆಚ್ಚು ತಿಳಿದಿರಲಿಲ್ಲ, ಆದರೆ ಒಬ್ಬನು ಆ ದೇವರ ಆತ್ಮವನ್ನು ಹೊಂದಿದ್ದನು ಎಂದು ಅವನು ಅರಿತ್ತಿದ್ದನು, ಅವನಲ್ಲಿ ಆ ಶಕ್ತಿಯು ಇತ್ತು. ಸತ್ಯವೇದದಲ್ಲಿ ದೊಡ್ಡ ಸಾಧನೆಗಳನ್ನು ಮಾಡಿದ ಜನರೆಲ್ಲರೂ ನಿನ್ನ ಹಾಗೂ ನನ್ನ ಹಾಗೆ ಬಲಹೀನರೇ ಆಗಿದ್ದರು ಆದರೆ ಅವರು ದೇವರ ಶಕ್ತಿಯನ್ನು ಹೊಂದಿದ್ದರು.

ನಾವುಗಳು ಸಹ ದೇವರ ಶಕ್ತಿಯನ್ನು ಹೊಂದಲು ಸಾಧ್ಯವಿದೆ (ಎಫೆಸ 3:20). ಅದ್ಭುತ ಮಾಡುವ ಶಕ್ತಿಯನಲ್ಲ, ಆದರೆ ನಿಜವಾದ ಶಕ್ತಿ. ನಮಗೆ ಆ ಶಕ್ತಿಯ ಅಗತ್ಯವಿದೆ. ನಮ್ಮನ್ನು ಹೊರತುಪಡಿಸಿ ದೇವರು ಕಾರ್ಯಗಳನ್ನು ಮಾಡಬಹುದು; ಆದರೆ ನಾವು ಆತನಿಲ್ಲದೆ ಏನನ್ನೂ ಮಾಡಲು ಸಾಧ್ಯವಿಲ್ಲ!

## ಮುಕ್ತಾಯ

ನೀವು ದೇವರಿಗೆ ವಿಶೇಷವಾದವರೇ; ನೀವು ಅದನ್ನು ಅರಿತಿರುವಿರಾ? ಒಂದು ದಿನ ಒಬ್ಬರು, ನಾನು ಗಮನಿಸಲಾರದ ಒಂದು ಆಸಕ್ತಿರವಾದ ಸಂಗತಿಯನ್ನು ತೋರಿಸಿದರು ಮತ್ತಾಯ 10:29. 31ರಲ್ಲಿ ಹೇಳುವಂತೆ, ''ದುಡ್ಡಿಗೆ ಎರಡು ಗುಬ್ಬಿಗಳನ್ನು ಮಾರುವದುಂಟಲ್ಲಾ; ಆದರೂ ನಿಮ್ಮ ತಂದೆಯ ಚಿತ್ತವಿಲ್ಲದೆ ಒಂದಾದರೂ ನೆಲಕ್ಕೆ ಬೀಳದ್ದು,'' ''ಅದರಿಂದ ಹೆದರ ಬೇಡಿರಿ; ಬಹಳ ಗುಬ್ಬಿಗಳಿಗಿಂತ ನೀವು ಹೆಚ್ಚಿನವರು'' ದುಡ್ಡಿಗೆ ಎರಡು ಗುಬ್ಬಿಗಳು ''ದುಡ್ಡು'' ಅಂದರೆ ಗ್ರೀಕ್‌ನಲ್ಲಿ ''ಚಿಕ್ಕ ತಾಮ್ರದ ನಾಣ್ಯ'' ಅಲ್ಪವಾದದ್ದೆ.

ಈಗ ಲೂಕ 12:6, 7ನ್ನು ನೋಡೋಣ: ''ಐದು ಗುಬ್ಬಿಗಳನ್ನು ಎರಡು ದುಡ್ಡಿಗೆ ಮಾರುತ್ತಾರಲ್ಲಾ? ಆದಾಗ್ಯೂ ಅವುಗಳಲ್ಲಿ ಒಂದಾದರೂ ದೇವರಿಗೆ ಮರೆತುಹೋಗುವದಿಲ್ಲ. ನಿಮ್ಮ ತಲೇಗೂದಲುಗಳು ಸಹ ಎಲ್ಲವೂ ಎಣಿಕೆಯಾಗಿವೆ, ಹೆದರಬೇಡಿರಿ; ಬಹಳ ಗುಬ್ಬಿಗಳಿಗಿಂತ ನೀವು ಹೆಚ್ಚಿನವರು.'' ಎರಡು ದುಡ್ಡಿಗೆ *ಐದು* ಗುಬ್ಬಿಗಳು ಒಂದು ದುಡ್ಡಿಗೆ ಎರಡು ಗುಬ್ಬಿಗಳಾದರೆ, ನಾಲ್ಕು ಗುಬ್ಬಿಗಳಿಗೆ ಎರಡು ದುಡ್ಡುಗಳು ಆ ಹೆಚ್ಚಿನ ಗುಬ್ಬಿಯ ವಿಚಾರವೇನು? ಒಂದು ವೇಳೆ ಅದನ್ನು ವ್ಯವಹಾರದ ಲಾಭಕ್ಕಾಗಿ ಪುಕ್ಕಟೆಯಾಗಿ ನೀಡಿರಬಹುದು. ಅದು ಬೆಲೆಯಿಲ್ಲದ್ದಾಗಿತ್ತೇ! ಆದಾಗ್ಯೂ ದೇವರು ಅದನ್ನು ಲಕ್ಷಿಸುವನು!

ಯಾವ ವಿಧವಾಗಿ ಅದು ಪ್ರಯೋಜನಕಾರಿಯಾಗಿರದಿದ್ದರೂ, ದೇವರೂ ಅದರ ಬಗ್ಗೆ ಚಿಂತಿಸಿದನು! ಅಪ್ರಯೋಜನವಾದ ಆ ಗುಬ್ಬಿಯ ಬಗ್ಗೆ ದೇವರು ಚಿಂತಿಸುವನಾದರೆ,

ನಿನಗಾಗಿ ಆತನು ಎಷ್ಟೋ ಹೆಚ್ಚಾದ ಚಿಂತನೆಯನ್ನು ಮಾಡುವನಲ್ಲವೇ! ಸಾಮರ್ಥ್ಯವುಳ್ಳ ದೇವರಲ್ಲಿ ಭರವಸವಿಡು!

ಅಂತಿಮವಾಗಿ ನಾವು ಇದನ್ನು ಮುಗಿಸುವ ಹಾಗೆ ದೇವರ ಎರಡು ಸಾಮರ್ಥ್ಯದ ಬಗ್ಗೆ ನಾನು ಮಾತನಾಡುತ್ತೇನೆ. ಅದರ ಸಂಗಡ ಕೆಲವು ಒಳ್ಳೇಯ ಹಾಗೂ ಅಹಿತರಕರವಾದ ಸಂಗತಿಗಳನ್ನು ಸಹ ತಿಳಿಸುತ್ತೇನೆ. ದೇವರು ರಕ್ಷಿಸಲು ಸಾಮರ್ಥ್ಯವುಳ್ಳವನಾಗಿದ್ದಾನೆ ಎಂಬದೇ ಒಳ್ಳೆಯ ವಾರ್ತೆಯಾಗಿದೆ; ದೇವರು ನಾಶಮಾಡಲು ಸಹ ಸಾಮರ್ಥ್ಯವುಳ್ಳವನು ಎಂಬದು ಅಹಿತವಾದ ಸುದ್ದಿಯಾಗಿದೆ. ಮತ್ತಾಯ 10:28ರಲ್ಲಿ ಸುವಾರ್ತೆ ಸೇವೆಗಾಗಿ ಹೋದ ವರಿಗೆ ಯೇಸು ತಿಳಿಸಿದ್ದೇನೆಂದರೆ, "ಇದಲ್ಲದೆ ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ, *ಆತ್ಮ ದೇಹ* ಎರಡನ್ನು ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೆ ಹೆದರಿರಿ." (ಒತ್ತಿ ಹೇಳಿದ್ದು ನನ್ನದು.) ಯಾಕೋಬ 4:12ಎ ಯಲ್ಲಿ, "ನ್ಯಾಯವನ್ನು ವಿಧಿಸಿದ ನ್ಯಾಯಾಧಿಪತಿ ಒಬ್ಬನೇ; ಆತನೇ ಉಳಿಸುವದಕ್ಕೋ ನಾಶಮಾಡುವದಕ್ಕೂ *ಶಕ್ತನು.*" (ಒತ್ತಿ ಹೇಳಿದ್ದು ನನ್ನದು.)

ದೇವರು ನಿನಗೆ ರಕ್ಷಿಸುವ ಅಥವಾ ನಾಶಪಡಿಸುವ ವ್ಯಕ್ತಿಯಾಗಿರಬೇಕೆ? ಅದರ ನಿರ್ಧಾರವನ್ನು ನೀನೇ ಮಾಡಬೇಕು. ನಿನ್ನ ಜೀವಿತವನ್ನು ಆತನಿಗೆ ಸಮರ್ಪಿಸಲು ಇಚ್ಛಿಸುವದಾದಲ್ಲಿ, ಅದನ್ನು ಈಗಲೇ ಮಾಡು!

---

ಟಿಪ್ಪಣಿಗಳು

[1]ವಿವಿಧ ಅನುವಾದಗಳಲ್ಲಿ ವ್ಯತ್ಯಾಸಗಳಿವೆ, ಆದಾಗ್ಯೂ ಅವುಗಳನ್ನು ಸರಳೀಕರಿಸಲಿಕ್ಕೆ ಪ್ರಯತ್ನಿಸಿರುವೆನು. [2]ಅಗತ್ಯತೆಗೆ ಅನುಗುಣವಾಗಿ ವಿಸ್ತರಣೆ ಮಾಡಬಹುದು. ಹೌದು ಅಬ್ರಹಾಮನು ಯಜ್ಞವನ್ನು ಪೂರ್ಣಮಾಡಲು ದೇವರು ಅನುಮೋದಿಸಲಿಲ್ಲ, ಬದಲಾಗಿ ಒಂದು ಟಗರನ್ನು ಒದಗಿಸಿದನು. [3]ಇಬ್ರಿಯ 5:7 ಯೇಸುವಿನ ಪ್ರಾರ್ಥನೆಯನ್ನು ಆಲಿಸಿ, ಉತ್ತರವನ್ನು ನೀಡಲಾಗಿದೆ - ಅದು ಇನ್ನೊಂದು ವಿಧ.